ಅಂತಹ ಅಪರಾಧಿಗಳನ್ನು ಏನಾದರೂ ಬಿಡುಗಡೆ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ಈ ಕೇಸುಗಳನ್ನು ಇತ್ಯರ್ಥ ಮಾಡುವುದಕ್ಕೆ ಆಗುತ್ತದೆಯೇ? ಇಂತಹ ದು ದುಸ್ಥಿತಿಯಿಂದ ಅವರು ಅಲ್ಲಿ ಕೊಳೆಯುತ್ತಿರುತ್ತಾರೆ. ಅದರ ಬಗ್ಗೆ ಏನಾದರೂ ನಿರ್ಣಯ ತೆಗೆದುಕೊಳ್ಳುವುದಕ್ಕಾಗುತ್ತದೆಯೇ।

ಶ್ರೀ ಡಿ.ಬಿ. ಚಂದ್ರೇಗೌಡ :— ಸರ್ಕಾರಕ್ಕೆ ಆ ವ್ಯಾಪ್ತಿ ಇಲ್ಲ. ಡಾ: ರಾಜ್ ಕುಮಾರ್ ಕೇಸ್ ಇಂಥಾದ್ದೇ ಒಂದು ಕಾರಣಕ್ಕಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ, ನಾವು ನೀವು ಎಲ್ಲಾ ಸೇರಿ ಹೋಗಿದ್ದ ತಮಗೆ ಗೊತ್ತಿದೆ. ಸರ್ಕಾರಕ್ಕೆ ಸರ್ವತಂತ್ರ ಸ್ವಾತಂತ್ರವೇನಿಲ್ಲ. ಆದ್ದರಿಂದ, ಇಂತಹ ಕೇಸುಗಳನ್ನು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದೇ ಈ ಫಾಸ್ಟ್ ಟ್ರಾಕ್ ಕೋರ್ಟ್‌ಗಳನ್ನು ಮಾಡಿರುವುದು.

ಕರ್ನಾಟಕ ಹಾಲು ಮಂಡಲಕ್ಕೆ ಬಂದ ಆದಾಯ.

(3109) ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ (ಕೋಲಾರ) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2000-01ನೇ ಸಾಲಿನಿಂದ ಕಳೆದ 3 ವರ್ಷಗಳಲ್ಲಿ ಕರ್ನಾಟಕ ಹಾಲು ಮಹಾಮಂಡಳಿಗೆ ಪ್ರತಿವರ್ಷ ಬಂದಿರುವ ಆದಾಯವೆಷ್ಟು?

ಆ) ಯಾವ ಯಾವ ಸಂಸ್ಥೆಯಿಂದ ಎಷ್ಟೆಷ್ಟು ಆದಾಯ ಮಹಾ ಮಂಡಳಿಗೆ ಬಂದಿರುತ್ತದೆ?

ಇ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಕರ್ನಾಟಕ ಹಾಲು ಮಹಾಮಂಡಳಿಗಳಿಸಿದ ನಿವ್ವಳ ಲಾಭವೆಷ್ಟು?

ಈ) ಈ ನಿವ್ವಳ ಲಾಭದಲ್ಲಿ ಉಪ ನಿಯಮಗಳ ಪ್ರಕಾರ ಸದಸ್ಯರಿಗೆ ಲಾಭ ಶೇರು ಡಿವಿಡೆಂಡ್ ಪಾವತಿಸಲಾಗಿದೆಯೇ?

ಉ) ಪಾವತಿಸದಿದ್ದಲ್ಲಿ ಅದಕ್ಕೆ ಕಾರಣವೇನು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಆದಾಯ (ನಿವ್ವಳ : ಲಾಭ)

(ಲಕ್ಷ ರೂ.ಗಳಲ್ಲಿ)

1998-99	1999-2000	2000-01
408.14	36.72	59.41

ಅ) ಕಳೆದ 3 ವರ್ಷಗಳ ಘಟಕವಾರು ಆದಾಯ (ನಿವ್ವಳ ಲಾಭ : ನಿವ್ವಳ ನಷ್ಟ) ತಟ್ಟೆ

(ಲಕ್ಷ ರೂ.ಗಳಲ್ಲಿ)

ಘಟಕದ ಹೆಸರು	1998-99	1999-2000	2000-01
ಮದರ್ ಡೇರಿ	492.86	169.57	209.33
ಪ.ಅ.ಕಾ ರಾಜನಕುಂಟೆ	33.69	—18.68	59.26
ಪ.ಅ.ಕಾ ಗುಬ್ಬಿ	98.77	41.31	112.34
ಪ.ಅ.ಕಾ ಧಾರವಾಡ	131.58	33.67	86.78
ಪ.ಅ.ಕಾ ಹಾಸನ	—67.82	—28.20	10.36
ನಂದಿನಿ ಹಾಲು ಉತ್ಪನ್ನ ಘಟಕ	10.35	20.29	83.57
ಕೇಂದ್ರೀಯ ತರಬೇತಿ ಕೇಂದ್ರ	—1.29	—13.89	—1.19
ಪೌಚ್ ಫಿಲಂ ಘಟಕ	—56.60	—62.45	—83.05
ಕೇಂದ್ರ ಕಛೇರಿ	—245.62	—81.92	—483.47
ಧ್ರುವ ಸಾರಜನಕ ಘಟಕ	—7.14	0.00	0.00
ತಿರುಪತಿ ಮಾರಾಟ ಮಳಿಗೆ	0.00	1.87	6.26
ಬೆನ್ನೈ ಮಾರಾಟ ಮಳಿಗೆ	0.00	—0.92	6.91
(—ನಿವ್ವಳ ನಷ್ಟ ಗುರುತಿಸಿದೆ.)			
ಒಟ್ಟು	408.14	36.72	59.41

ಇ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ರೂ. 504.27 ಲಕ್ಷಗಳು ಕರ್ನಾಟಕ ಹಾಲು ಮಹಾ ಮಂಡಳಿಗೆ ನಿವ್ವಳ ಲಾಭವಾಗಿ ಬಂದಿರುತ್ತದೆ.

ಈ) ಪಾವತಿಸಿರುವುದಿಲ್ಲ.

ಉ) 1997-98ನೇ ಸಾಲಿನಿಂದ ವರ್ಷವಾರು ಹಣಕಾಸಿನ ತಟ್ಟೆಗಳನ್ನು ಸಲ್ಲಿಸಿದ್ದಾಗ್ಯೂ ಸಹ ಲೆಕ್ಕ ಪತ್ರಗಳ ಪರಿಶೋಧನಾ ವರದಿಯನ್ನು ಜಂಟಿ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ, ನಿಯಮ 441 ಇವರು ಬಿಡುಗಡೆ ಮಾಡಿರುವುದಿಲ್ಲ. ಆದಕಾರಣ ಸದಸ್ಯರಿಗೆ ಲಾಭ ಶೇರು ಡಿವಿಡೆಂಡ್‌ಗಳನ್ನು ಪಾವತಿಸಿರುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :— ಮಾನ್ಯ ಅಧ್ಯಕ್ಷರೇ, ಈ ಹಾಲು ಎಂದಕೂಡಲೇ ಕೆಲವು ಪ್ರಶ್ನೆಗಳ ಜೊತೆಯಲ್ಲಿ ಸರ್ದಾರ್ ವಲ್ಲಭ್‌ಭಾಯ್ ಪಟೇಲ್‌ರು ದೇಶದಲ್ಲಿ, ನಿಮ್ಮ ಅಣ್ಣಂದಿರಾದ ಎಂ.ವಿ. ಕೃಷ್ಣಪ್ಪನವರು ಈ ಹಾಲು ಮಹಾಮಂಡಳಿಯಲ್ಲಿ ಇದ್ದರು.

ತಾವೂ ಕೂಡ ನಿರ್ದೇಶಕರಾಗಿ ಇದ್ದಿರಿ. ಈ ಹಿನ್ನೆಲೆಯಲ್ಲಿ, ಆದರಲ್ಲೂ ಕೋಲಾರ ಜಿಲ್ಲೆಯಲ್ಲಿ 1230 ಸಹಕಾರ ಸಂಘಗಳು ಇವೆ. ಒಂದು ದಿವಸಕ್ಕೆ 5 ಲಕ್ಷ 70 ಸಾವಿರ ಲೀಟರ್ ಹಾಲನ್ನು ಉತ್ಪತ್ತಿ ಮಾಡುತ್ತೇವೆ. ನಾವು ಇದರಲ್ಲಿ 2 ಲಕ್ಷ 20 ಸಾವಿರ ಲೀಟರನ್ನು ಮದರ್ ಡೈರಿಗೆ ಕೊಡುತ್ತೇವೆ. 1988ರಲ್ಲಿ ಒಂದು ಆಜ್ಞೆಯನ್ನು ಮಾಡಿದ್ದಾರೆ. 29-6-88ರಲ್ಲಿ ನೀವು ಪ್ರಶ್ನೆಯನ್ನು ಕೇಳಿದಾಗ ಆ ಪ್ರಶ್ನೆ ಎಂ.ಒ.ಯು. ಆಗಿದೆ.

> ``Mother Dairy management to be continued under the Karnataka Milk Producers' Federation. The Chilling centres in Kolar Unions should be continued to be managed by the Karnataka Co-operative Milk Producers' Federation. The procurement of milk from Kolar milk union will continue to be the responsibility of the Karnataka Co-operative Milk Producers' Federation and be processed at the Mother Diary."

ಸ್ವಾಮಿ, ನಾವು ಒಂದು ದಿವಸಕ್ಕೆ 5 ಲಕ್ಷ 70ಸಾವಿರ ಲೀಟರ್ ಹಾಲನ್ನು ಉತ್ಪತ್ತಿ ಮಾಡುತ್ತೇವೆ. ಒಂದು ದಿವಸಕ್ಕೆ ಸುಮಾರು 45 ಲಕ್ಷ ರೂಪಾಯಿಗಳು ನಮ್ಮ ಕೋಲಾರ ಜಿಲ್ಲೆಗೆ ಹೋಗುತ್ತದೆ. ಅಲ್ಲಿಗೆ ಒಂದು ತಿಂಗಳಿಗೆ 175 ಕೋಟಿ ರೂಪಾಯಿಗಳು ಈ ಒಂದು ಜಿಲ್ಲೆಯಿಂದ ಹಾಲಿನಲ್ಲಿ ಬರುತ್ತದೆ. ಒಂದು ತಿಂಗಳಿಗೆ ಹದಿಮೂರುವರೆ ಕೋಟಿ ರೂಪಾಯಿಗಳು ಬರುತ್ತದೆ. ಈ ಪರಿಸ್ಥಿತಿಯಲ್ಲಿ ಮದರ್ ಡೈರಿಗೆ ಕೆಪ್ಯಾಸಿಟಿ ಇರುವುದು 4 ಲಕ್ಷ ಲೀಟರ್ ಹಾಲನ್ನು ಕೊಳ್ಳುವುದಕ್ಕೆ. ನಾವು 5 ಲಕ್ಷ 70ಸಾವಿರ ಲೀಟರ್ ಹಾಲನ್ನು ಉತ್ಪತ್ತಿ ಮಾಡಿ, ನೀವು ತೆಗೆದುಕೊಳ್ಳುವುದು ಕೇವಲ 2 ಲಕ್ಷ 20 ಸಾವಿರ ಲೀಟರ್ ಇಷ್ಟನ್ನು ತೆಗೆದುಕೊಂಡು, ನೀವು ಅವತ್ತಿನಿಂದ ಇವತ್ತಿನವರೆಗೆ ಲಾಭ ಮಾಡಿರುವುದು 45 ಕೋಟಿ ರೂ.ಗಳು ಸ್ವಾಮಿ, ತೆಲುಗಿನಲ್ಲಿ ಒಂದು ಗಾದೆ ಇದೆ. ಹಾಲು ಉತ್ಪಾದನೆ ಮಾಡುವವರು ನಮ್ಮ ಜಿಲ್ಲೆಯವರು. ನಾವು ಕೊಡುವ 2 ಲಕ್ಷ 20 ಸಾವಿರ ಲೀಟರ್ ಈ ಮದರ್ ಡೈರಿಗೆ. ಲಾಭ ಮಾತ್ರ ಇವರಿಗೆ ಇರಬೇಕು, ಕಷ್ಟ ಮಾತ್ರ ನಮಗಿರಬೇಕೇ, ಇದು ಯಾವ ನ್ಯಾಯ? ಇದನ್ನು ನೀವು ಸರ್ಕಾರ ಆಜ್ಞೆಗಳು ಇದ್ದರೂ ಕೂಡ ಮಾಡುತ್ತಿಲ್ಲ. ಆದರಲ್ಲಿ ಇನ್ನೊಂದು ಇದೆ. 70 ಭಾಗದಷ್ಟು ಆದಾಯವನ್ನು ಕೊಡಬೇಕು ಅಂತ. ನಾನು ಆಗಲೇ ಒಂದು ಗಾದೆ ಮಾತು ಹೇಳಿದೆ, "ಸೊಮ್ಮ ಒಕ್ಕರದಿ, ನೋಗು ಒಕ್ಕರದಿ" ಅಂತ. ನಾನು ಅಂದರೆ ವಸ್ತು ಒಬ್ಬರದ್ದು, ಮಜಾ ಮಾಡುವವರು ಒಬ್ಬರು ಅಂತ. ಅದು ಇವತ್ತು ಮದರ್ ಡೈರಿಯಲ್ಲಿ ನಡೆಯುತ್ತಿದೆ. ಇದನ್ನು ನಿಲ್ಲಿಸಿ 70 ಭಾಗದಷ್ಟು ಏನು ಲಾಭ ಬಂದಿದೆ, ಅದನ್ನು ಕೋಲಾರ ಯೂನಿಯನ್‌ಗೆ ಅಥವಾ

ರೈತರಿಗೆ ಬರುವಂತೆ ಮಾಡಿ. ಆ ಮದರ್ ಡೈರಿ ನಾವು ಕೊಡುತ್ತಿರುವ ಹಾಲಿನಿಂದ ನಡೆಯುತ್ತಿದೆ. ಆದ್ದರಿಂದ ಆ ಮದರಿ ಡೈರಿಯನ್ನು ಕೋಲಾರ ಯೂನಿಯನ್‌ಗೆ ಕೊಟ್ಟು ಬಿಟ್ಟರೆ ನಾವು ಸ್ವಲ್ಪ ಸಂವೃದ್ಧಿಯಾಗುತ್ತದೆ. ಕೋಲಾರ ಜಿಲ್ಲೆಯ ರೈತರಿಗೆ ಕುಡಿಯಲು ನೀರು ಇಲ್ಲ, ಮಳೆ ಇಲ್ಲ, ನಮಗೆ ಸಿಲ್ಕ್ ಮತ್ತು ಮಿಲ್ಕ್ ಬಿಟ್ಟರೆ ನಾವು ಜೀವನ ಮಾಡುವುದಕ್ಕೂ ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ಒಂದು ಧೃಡವಾದ ಕ್ರಮ ಜರುಗಿಸದೇ ಇದ್ದರೆ ಬಹಳ ಕಷ್ಟವಾಗುತ್ತದೆ. ನಮಗೆ ಬಂಗಾರ ಹೋಯಿತು. ಸೀಡ್ ಹೋಯಿತು. ಈ ಹಿನ್ನೆಲೆಯಲ್ಲಿ ಸರ್ಕಾರ ಧೃಡ ಸಂಕಲ್ಪ ಮಾಡಿ ಕೋಲಾರ ಯೂನಿಯನ್‌ಗೆ ಆದರ ಲಾಭವನ್ನು ಕೊಡುವಂತಾದರೂ ಮಾಡಿ, ಅಥವಾ ಅವರು 4 ಲಕ್ಷ ಲೀಟರ್ ಹಾಲನ್ನು ಉಪಯೋಗಿಸಿಕೊಳ್ಳುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಿ, ಆದು ಸಾಧ್ಯವಿಲ್ಲದಿದ್ದರೆ ಈ ಮದರ್ ಡೈರಿಯನ್ನು ಕೋಲಾರ ಯೂನಿಯನ್‌ಗೆ ಕೊಡುವಂತೆ ಮಾಡಿ ಎಂದು ನಾನು ಕೇಳುತ್ತೇನೆ.

ಶ್ರೀ ಎ. ಕೃಷ್ಣಪ್ಪ (ಸಕ್ಕರೆ ಮತ್ತು ಪಶುಸಂಗೋಪನಾ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀನಿವಾಸಗೌಡರು ಹತ್ತು ಹಲವಾರು ಪ್ರಶ್ನೆಗಳ ಸುರಿ ಮಳೆಯನ್ನು ಮಾಡಿದ್ದಾರೆ. ಅದನ್ನು ಕೇಳುವುದಕ್ಕೆ ತಮಗೂ ಬಹಳ ಇಂಪಾಗಿತ್ತು ಎಂಬುದು ನನ್ನ ಭಾವನೆ. ಏಕೆಂದರೆ ತಾವು ಕೂಡ ಆ ಜಿಲ್ಲೆಯವರು.

ಅಧ್ಯಕ್ಷರು :— ಅವರು ಇರುವುದನ್ನು ಹೇಳಿದ್ದಾರೆ. ನಮ್ಮ ಜಿಲ್ಲೆಗೆ ತಾವು ಇನ್ನು ಯಾವ ರೀತಿಯಲ್ಲಿ ಸಹಾಯ ಮಾಡುತ್ತೀರಿ ಹೇಳಿ? ಒಂದು ದೊಡ್ಡ ನದಿ ಇಲ್ಲ. ತುಂಗಾಭದ್ರ ನದಿ ಇಲ್ಲ, ಕಾವೇರಿ ನದಿ ಇಲ್ಲ. ಅಥವಾ ಕೃಷ್ಣ ನದಿ ಇಲ್ಲ. ನಾವು ಮಿಲ್ಕ್ ಪ್ರೊಡ್ಯೂಸ್ ಮಾಡುತ್ತೇವೆ. ಅದನ್ನು ತೆಗದುಕೊಳ್ಳುವುದಿಲ್ಲವೆಂದರೆ ಅರ್ಥ ಏನಿದೆ?

ಶ್ರೀ ಎ. ಕೃಷ್ಣಪ್ಪ :— ಮಾನ್ಯ ಅಧ್ಯಕ್ಷರೇ ಕೋಲಾರ ಜಿಲ್ಲೆಯ ವಿಚಾರದಲ್ಲಿ ಎರಡನೇ ಮಾತು ಇಲ್ಲ. ಆ ಬಗ್ಗೆ ನನ್ನದೇನೂ ತಕರಾರು ಇಲ್ಲ. ಆದರೆ ಹಲವಾರು ವಿಚಾರಗಳನ್ನು ಸುರಿಮಳೆ ಸುರಿದಂತೆ ಹೇಳಿದ್ದಾರೆ. ಕೋಲಾರ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಅವರೂ ಕೂಡ ಇದ್ದರು ಈ ಬಗ್ಗೆ 3-4 ಸಭೆಗಳು ನಡೆದಿವೆ. ಆದರೆ ಮಾನ್ಯ ಸದಸ್ಯರಾದ ಶ್ರೀನಿವಾಸಗೌಡರು ಮಾತನಾಡುತ್ತಾ, 1988ನೇ ಇಸವಿಯಲ್ಲಿ ಮಾಡಿಕೊಂಡ ಎಂ.ಒ.ಯು. ಪ್ರಕಾರ ಟೋಟಲ್ ಪ್ರೊಡಕ್ಷನ್ ಸೇಲ್ಸ್ ಮಾಡುವ ವಿಚಾರದಲ್ಲಿ ಕೆ.ಎಂ.ಎಫ್. ಬದ್ಧತೆಯನ್ನು ಇಟ್ಟುಕೊಳ್ಳಬೇಕೆಂದು ಹೇಳಿದ್ದಾರೆಂದು ಹೇಳಿದರು. ಆದು ಆ ರೀತಿ ಇಲ್ಲ. ನಾನೂ ಕೂಡ ಓದಿದ್ದೇನೆ. ನನಗೆ ಆದು ಅರ್ಥವಾಗಿರುವ ಪ್ರಕಾರ ಎನಿ ಪ್ರೊಡಕ್ಷನ್ ದಟ್ ಕೆನ್ ಬಿ ಅಂಡರ್‌ಟೇಕನ್ ಬೈ ಕೆ.ಎಂ.ಎಫ್. ಎಂದು ಅಲ್ಲ. ದಿ ಪ್ರೊಡಕ್ಷನ್ ವಿಚ್ ವಾಸ್ ದೇರ್ ಅನ್ ದಟ್ ಪರ್ಟಿಕ್ಯುಲರ್ ಡೇ, ಅವತ್ತಿನ ಕಾಲಕ್ಕೆ ಏನು ನಾವು ಉತ್ಪಾದನೆ ಮಾಡುತ್ತಿದ್ದೆವು ಆದನ್ನು ಸಂಪೂರ್ಣವಾಗಿ ಮಾರಾಟ

ಮಾಡಬೇಕು ಎನ್ನುವ ವಿಚಾರ ಆದರಲ್ಲಿ ಬರುತ್ತದೆಯೇ ವಿನಹಃ ಅಲ್ಟಿಮೇಟ್ ಆಗಿ ಆದರ ಅರ್ಥ 8 ಲಕ್ಷ ಆಗಲಿ 4 ಲಕ್ಷ ಆಗಲಿ 40 ಲಕ್ಷ ಆಗಲಿ ಎಷ್ಟೇ ಆಗಲಿ ಆದನ್ನು ಸೇಲ್ ಮಾಡಬೇಕೆಂದು ಆ ಅಗ್ರಿಮೆಂಟ್‌ನಲ್ಲಿ ಇದೆಯೇ? ಇಲ್ಲ. ಲಾಭದ ವಿಚಾರದಲ್ಲಿ ನಮ್ಮ ಮಾನ್ಯ ಸದಸ್ಯರು ಹಲವಾರು ವಿಚಾರಗಳನ್ನು ಹೇಳಿದ್ದಾರೆ ಅವರಿಗೆ ಆ ಲಾಭವನ್ನು ಕೊಡಬಾರದು ಎಂದು ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಲಾಭ ಕೊಟ್ಟೇ ತೀರಬೇಕು. ಆದರೆ ಇಲ್ಲಿ ಏನಾಗಿದೆ ಅಂದರೆ ಕಳೆದ 3-4 ವರ್ಷಗಳಿಂದ ಆಡಿಟ್ ವರದಿಯನ್ನು ಪೂರ್ಣಗೊಳಿಸಿ ಆಡಿಟ್ ವರದಿಯನ್ನು ಕೆ.ಎಂ.ಎಫ್.ಗೆ ಕೊಟ್ಟಿಲ್ಲ. ಆ ಆಡಿಟ್ ವರದಿ ಬಂದ ನಂತರ ಆದರಲ್ಲಿ ಎಷ್ಟು ಹಣವನ್ನು ಕೆ.ಎಂ.ಎಫ್.ಗೆ ಕೊಟ್ಟಿಲ್ಲ. ಆ ಆಡಿಟ್ ವರದಿ ಬಂದ ನಂತರ ಆದರಲ್ಲಿ ಎಷ್ಟು ಹಣವನ್ನು ಕೆ.ಎಂ.ಎಫ್., ಕೋಲಾರ ಯೂನಿಯನ್ ನವರಿಗೆ ಕೊಡಬೇಕು ಎನ್ನುವುದನ್ನು ತೀರ್ಮಾನ ಮಾಡಬೇಕಾಗುತ್ತದೆ. ಆದ್ದರಿಂದ ನಾನು ನಮ್ಮ ಸಹಕಾರ ಸಚಿವರ ಹತ್ತಿರ ಮಾತನಾಡಿ, ಆ 3-4 ವರ್ಷಗಳ ಆಡಿಟ್ ವರದಿ ಏನೂ ಬಾರದೇ ಇದೆ ಆದನ್ನು ತರಿಸಿಕೊಂಡು ಕಾನೂನಿನ ಮಿತಿಯಲ್ಲಿ ಆ ಸಂಸ್ಥೆಗೆ ಕೊಡಬೇಕಾದ ದುಡ್ಡನ್ನು ನಾನು ಕೊಡಿಸುತ್ತೇನೆ. ಮತ್ತು ಉತ್ಪಾದನೆ ಮತ್ತು ಸೇಲ್ಸ್ ವಿಚಾರದಲ್ಲಿ ಮಾರ್ಕೇಟಿಂಗ್ ಬಹಳ ಚಿಂತಾಜನಕವಾಗಿದೆ, ಹಲವಾರು ಕಷ್ಟಗಳು ಇವೆ ಆದರ ಜೊತೆ ಇದು ಒಂದು ಕಷ್ಟ ಸೇರಿಕೊಂಡಿದೆ ಅಂತ ಹೇಳಿ ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ರೀತಿಯ ತೊಂದರೆಗಳನ್ನು ತಪ್ಪಿಸಬೇಕೆಂದು ಹಲವಾರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ತಮಿಳುನಾಡಿಗೆ ಹೋಗಿ ಮಾತುಕತೆ ಮಾಡಿ, ಅಲ್ಲಿ ಪೌಡರ್ ಕನ್‌ವರ್‌ಷನ್ ಮಾಡುವುದಕ್ಕೆ ನಾವು ಮಾಡಿದ್ದೇವೆ. ಕಲ್ಕತ್ತಾಗೆ ನಾವು ಸಪ್ಲೈ ಕಳುಹಿಸುತ್ತಿದ್ದೇವೆ. ಗೋವಾ ರಾಜ್ಯಕ್ಕೆ ಹೋಗಿ ಅಲ್ಲಿ ಮಾತುಕತೆ ಮಾಡಿ ಅಲ್ಲಿಗೆ ಸ್ವಲ್ಪ ನಮ್ಮ ಪ್ರಾಡಕ್ಟ್‌ನ್ನು ಕಳುಹಿಸುತ್ತಿದ್ದೇವೆ. ಡೆಲ್ಲಿ ಮಿಲ್ಕ್ ಸಪ್ಲೈ ಯೂನಿಯನ್ ಜೊತೆ ಮಾತುಕತೆ ಮಾಡಿ ನಮ್ಮ ಮಾಲುಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಅಧಿಕಾರಿಗಳ ಸಹಕಾರದಿಂದ ಅಲ್ಲಿ ಮಾರಾಟ ಮಾಡುತ್ತಿದ್ದೇವೆ ಈಗ ಕೇರಳಕ್ಕೆ ಸ್ವಲ್ಪ ನಮ್ಮ ಬೈ ಪ್ರಾಡಕ್ಟ್‌ನ್ನು ಕಳುಹಿಸುತ್ತಿದ್ದೇವೆ. ಇದರ ಜೊತೆಗೆ ಒಟ್ಟಾರೆ ನಮ್ಮ ಕರ್ನಾಟಕ ರಾಜ್ಯದ ರೈತರ ಸಂಕಷ್ಟಗಳನ್ನು ಗಮನದಲ್ಲಿಟ್ಟುಕೊಂಡು ಹಾಲು ಉತ್ಪಾದನೆ ಏನು ಜಾಸ್ತಿಯಾಗಿದೆ, ಸಮ್ಮರ್‌ನಲ್ಲಿ ಕೂಡ ಹಾಲು ಉತ್ಪಾದನೆ ಜಾಸ್ತಿಯಾಗಿದೆ. ಅದಕ್ಕೋಸ್ಕರವಾಗಿ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಕೆ.ಎಂ.ಎಫ್. ಪ್ರಾಡಕ್ಟ್‌ನ್ನು ನೇಪಾಳಕ್ಕೂ ಕೂಡ ಎಕ್ಸ್‌ಪೋರ್ಟ್ ಮಾಡುತ್ತೇವೆ. ಈಗ ಶ್ರೀಲಂಕಾ ಜೊತೆ ಕೂಡ ಮಾತುಕತೆ ನಡೆಯುತ್ತಿದೆ ಬಹುಶಃ ಈ ಅಧಿವೇಶನ ಮುಗಿದ ಮೇಲೆ ಶ್ರೀಲಂಕಾ ಸರ್ಕಾರದ ಜೊತೆ ಮಾತುಕತೆ ಮಾಡಿ ಹಾಲಿಗೆ ಸಂಬಂಧಪಟ್ಟ ಹಾಗೆ ಮತ್ತು ಸಕ್ಕರೆಗೆ ಸಂಬಂಧಪಟ್ಟ ಹಾಗೆ ಎರಡೂ ಮಾಲುಗಳನ್ನು ಅಲ್ಲಿ ಮಾರಾಟ ಮಾಡುವುದಕ್ಕೆ ಈಗ ಒಂದು ಸುತ್ತಿನ ಮಾತುಕತೆ ನಡೆದಿದೆ. ಇಂತಹ ಎಲ್ಲಾ ಪ್ರಯತ್ನಗಳನ್ನು ಮಾಡಿ ನಾವು ಸ್ವಲ್ಪ ಮಟ್ಟಿಗೆ

ಯಶಸ್ಸನ್ನು ಕಂಡಿದ್ದೇವೆ. ಇನ್ನು ಕೋಲಾರಕ್ಕೆ ಪ್ರತ್ಯೇಕವಾಗಿ ಸಂಬಂಧಪಟ್ಟ ಹಾಗೆ ಆ ಯೂನಿಟನ್ನು ವರ್ಗಾವಣೆ ಮಾಡುವ ವಿಚಾರದಲ್ಲಿ ಅವರು ಏನು ಹೇಳಿದ್ದಾರೆ ಆ ಬಗ್ಗೆ ನಾನು ಇಲ್ಲಿ ನಿಂತು ಉತ್ತರ ಕೊಡುವುದಕ್ಕೆ ಕಷ್ಟವಾಗಬಹುದು, ನಾನು ಎರಡೂ ಕಡೆಯ ಸದಸ್ಯರುಗಳನ್ನು ಕರೆಸಿ ಮಾತುಕತೆ ಮಾಡಿ ಅದನ್ನು ವಹಿಸಿಕೊಳ್ಳುವುದಕ್ಕೆ ಏನಾದರೂ ಚಿಂತನೆ, ವಿಚಾರಗಳು ಕರೆಸಿ ಮಾತುಕತೆ ಮಾಡಿ ಅದನ್ನು ವಹಿಸಿಕೊಳ್ಳುವುದಕ್ಕೆ ಏನಾದರೂ ಚಿಂತನೆ, ವಿಚಾರಗಳು ಇದ್ದರೆ ಅದರ ಬಗ್ಗೆ ನಾನು ಸುದೀರ್ಘ ಮಾತುಕತೆ ಮಾಡುತ್ತೇನೆಂದು ಹೇಳಿ ಲಾಭಾಂಶದ ವಿಚಾರದಲ್ಲಿ ಆಡಿಟ್ ವರದಿ ಬೇಗ ಬರುವಂತೆ ಮಾಡುತ್ತೇನೆ, ಆ ವರದಿ ಬಂದ ಮೇಲೆ ಅವರಿಗೆ ಸೇರಬೇಕಾದ ಹಣವನ್ನು ಮುಟ್ಟಿಸಲಿಕ್ಕೆ ಸರ್ಕಾರ ಸರ್ವಪ್ರಯತ್ನ ಮಾಡುತ್ತದೆಂದು ಹೇಳುತ್ತೇನೆ.

ಶ್ರೀ ಎ. ನಾಗರಾಜ್ (ಮಾಲೂರು) :— ಮಾನ್ಯ ಅಧ್ಯಕ್ಷರೇ, ಕೋಲಾರ ಮಿಲ್ಕ್ ಯೂನಿಯನ್ 1988ರಲ್ಲಿ ಬೆಂಗಳೂರು ಮಿಲ್ಕ್ ಯೂನಿಯನ್‌ನಿಂದ ಬೇರ್ಪಟ್ಟಾಗ ಬೆಂಗಳೂರು ನಗರದಲ್ಲಿ ಮಾರ್ಕೆಟಿಂಗ್ ಏರಿಯಾ ಫಿಕ್ಸ್ ಮಾಡುವಾಗ ತಾರತಮ್ಯವಾಗಿದೆ. ಪೂರ್ಣವಾದ ಹಾಲು ಉತ್ಪಾದನೆ ಆಧಾರದ ಮೇಲೆ ಮಾರ್ಕೆಟ್ ಏರಿಯಾ ಬೈಫರ್‌ಕೇಟ್ ಮಾಡಲಿಲ್ಲ. ಆದ್ದರಿಂದ ಅದನ್ನು ತಾವು ಸರಿ ಮಾಡುತ್ತೀರಾ? ಕಳೆದ ಒಂದು ತಿಂಗಳ ಹಿಂದೆ ತಾವು ಪ್ರಧಾನ ಕಾರ್ಯದರ್ಶಿಯವರ ಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿದಿರಿ. ಆ ಸಮಿತಿ 15 ದಿವಸದೊಳಗಾಗಿ ತನ್ನ ವರದಿಯನ್ನು ಕೊಡಬೇಕೆಂದು ತಾವು ತೀರ್ಮಾನ ಮಾಡಿದರಿ, ಎರಡು ತಿಂಗಳಾದರೂ ಆ ಸಮಿತಿ ವರದಿ ನೀಡಿದೆಯೇ ಇಲ್ಲವೇ ಎನ್ನುವುದು ಗೊತ್ತಾಗಲಿಲ್ಲ. ಅವರು ವರದಿ ನೀಡಿದ್ದರೆ ಆ ವರದಿಯಲ್ಲಿ ಈ ಮಾರ್ಕೆಟಿಂಗ್ ಏರಿಯಾದಲ್ಲಿ ಆಗಿರುವ ತಾರತಮ್ಯಗಳ ವಿಚಾರ ಬಂದಿದೆಯೇ? ಮೂಲಭೂತವಾಗಿ ಕೋಲಾರ ಹಾಲು ಒಕ್ಕೂಟಕ್ಕೆ 1988ರಲ್ಲಿ ನಾವು ಬೈಫರ್‌ಕೇಟ್ ಮಾಡಿಕೊಂಡಾಗ ಬೆಂಗಳೂರು ಸಿಟಿಯಲ್ಲಿ ಸರಿಯಾದ ಮಾರ್ಕೆಟಿಂಗ್ ಏರಿಯಾ ಕೊಟ್ಟಿಲ್ಲ. ಅದನ್ನು ಸರಿ ಮಾಡಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಎ. ಕೃಷ್ಣಪ್ಪ :— ಮಾನ್ಯ ಅಧ್ಯಕ್ಷರೇ, ಮಾರ್ಕೆಟಿಂಗ್ ವಿಚಾರದಲ್ಲಿ ತಾರತಮ್ಯವಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವಿಚಾರದಲ್ಲಿಯೇ ನಾವೆಲ್ಲಾ ಕುಳಿತುಕೊಂಡು ಮಾತುಕತೆ ಮಾಡಿದೆವು. ಅವರು ಇವರಿಗೆ ಸಮಾಧಾನ ಮಾಡಬೇಕು, ಇವರು ಅವರಿಗೆ ಸಮಾಧಾನ ಮಾಡಬೇಕು. ಆ ಅಗ್ರಿಮೆಂಟ್ ಆದಾಗ ನಾನು ಪಾತ್ರದಾರನಾಗಿರಲಿಲ್ಲ. ಪ್ರಧಾನ ಕಾರ್ಯದರ್ಶಿಗಳ ನೇತೃತ್ವದಲ್ಲಿ ಒಂದು ಸಮಿತಿ ಮಾಡಿದಿರಿ, ಆ ವರದಿ ಏಕೆ ತಡವಾಗಿದೆ ಎಂಬುದನ್ನು ಕೇಳಿದ್ದಾರೆ. ಈ ಅಧಿವೇಶನ ಮುಗಿದ ಮೇಲೆ ಆ ವರದಿ ಬಗ್ಗೆ ಒಂದು ತೀರ್ಮಾನ ಕೊಟ್ಟು ಆ ಜಿಲ್ಲೆಯ ಸದಸ್ಯರಿಗೆ ನಾನು ತಿಳಿಸುತ್ತೇನೆ.

2.40 ಪಿ.ಎಂ.

ಶ್ರೀ ಸಿ. ಬೈರೇಗೌಡ :— ಇದಕ್ಕೆ ಕಾರಣರು ಯಾರು? ಈ ವಿಚಾರದಲ್ಲಿ ಎಫಿಷಿಯನ್ಸಿ ತೋರಿಸಿ ಹೆಚ್ಚಿಗೆ ವ್ಯಾಪಾರ ಮಾಡಬೇಕು. ಎಲ್ಲಿಯವರೆಗೆ ಈ ಪ್ರೊಟೆಕ್ಷನಿಸಂ ಇರುತ್ತದೆ, ಅಲ್ಲಿಯವರೆಗೆ ನಷ್ಟ ಇತ್ಯಾದಿಗಳು ಆಗುತ್ತಾ ಇವೆ. ಎಲ್ಲಾ ಯೂನಿಯನ್‌ಗಳು ಒಂದಕ್ಕೊಂದು ಪೈಪೋಟಿಯನ್ನು ನಡೆಸತಕ್ಕಂಥ ಅವಕಾಶವನ್ನು ಒದಗಿಸಿ ಕೊಡಿ.

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನ ಸಚಿವರು) :— ಇದಕ್ಕೆ ಸಂಬಂಧಪಟ್ಟಂಥ ವಿಚಾರವನ್ನು ಮಾನ್ಯ ಹಿರಿಯ ಸದಸ್ಯರು ಹೇಳಿದ್ದಾರೆ. ಲಿಬರಲೈಸೇಷನ್, ಗ್ಲೋಬಲೈಸೇಷನ್ ಇವೆಲ್ಲಾ ಪ್ರಪಂಚದಲ್ಲಿ ನಾವೆಲ್ಲರೂ ಈಗಾಗಲೇ ಒಪ್ಪಿಕೊಂಡಿದ್ದೇವೆ. ಇಲ್ಲಿ ಮಾತ್ರ ಮನೋಪಾಲಿ ಬಿಹೇವಿಯರ್ ಏಕೆ ಎಂದು ಅವರು ಕೇಳಿದ್ದಾರೆ. ಅದರ ಬಗ್ಗೆ ಸರಕಾರದವರು ಪರಿಶೀಲನೆ ನಡೆಸಿ ಒಂದು ಪರಿಹಾರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತದೆ. ಅವರ ಬಾಯಿಯಲ್ಲಿಯೇ ಬಂದಿದೆಯಲ್ಲಾ, ಕಾಂಪಿಟೇಷನ್ ಮನಾಪೆಲಿ ಬೇಡ ಎಂದು ಈಗ ನಮಗೆ ಸುಲಭ ಆಯಿತು ಒಬ್ಬರಿಗೊಬ್ಬರಿಗೆ ಇದ್ದಾಗ ಕ್ವಾಲಿಟಿ ಚೆನ್ನಾಗಿ ಬರುತ್ತದೆ. ಯಾರಿಗೆ ಕೆಪಾಸಿಟಿ ಇದೆಯೋ, ಯಾರು ಒಳ್ಳೆಯ ಸರ್ವೀಸ್ ಕೊಡುತ್ತಾರೋ ಅವರು ತಮ್ಮ ಒಟ್ಟಿನ ವ್ಯವಹಾರಗಳನ್ನು ಮಾಡಿಕೊಳ್ಳಬಹುದೆಂದು ಹೇಳಿದ್ದಾರೆ. ನಮ್ಮ ಇಲಾಖೆಯ ರಿವ್ಯೂ ಮಾಡುವ ಕಾಲದಲ್ಲಿಯೂ ಕೂಡ ಮಾನ್ಯ ಸದಸ್ಯರು ಎರಡು ಮೂರು ಸೆಜಷನ್ಸ್ ಕೊಟ್ಟಿದ್ದಾರೆ. ಅದನ್ನು ನಾನು ಇಲಾಖಾ ಪ್ರಮುಖರ ಜೊತೆಗೆ ಚರ್ಚೆ ಮಾಡಿದ್ದಾಗಿದೆ. ಹಾಗೆಯೇ ಈಗ ಹೇಳಿದ ವಿಚಾರಗಳನ್ನೂ ಕೂಡ ಗಮನದಲ್ಲಿಟ್ಟುಕೊಂಡು ಬರುವ ಸದನ ಜರುಗುವ ವೇಳೆಯಲ್ಲಿ ಇದಕ್ಕೆ ಒಂದು ಸೂಕ್ತ ಪರಿಹಾರವನ್ನು ಕಂಡುಕೊಂಡು ತಿಳಿಸುತ್ತೇನೆ ಎಂಬ ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು :— ಸಚಿವರೇ, ನಾನೂ ಕೂಡ 1966ನೇ ಇಸವಿಯಿಂದ 1974ನೇ ಇಸವಿಯವರೆಗೂ ಎಂಟು ವರ್ಷಗಳ ಕಾಲ ಚುನಾಯಿತ ಡೈರೆಕ್ಟರ್ ಆಗಿದ್ದೆ. ಆಗ ಒಂದೇ ಯೂನಿಯನ್ ಇತ್ತು. 1974 ರಲ್ಲಿ ಲೆಜಿಸ್ಲೇಟೀವ್ ಕೌನ್ಸಿಲ್‌ನ ಚೇರ್ಮನ್ ಆಗ ಬೇಕಾಗಿದ್ದರಿಂದ ಡೈರೆಕ್ಟರ್ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದೆನು. ಒಟ್ಟಾರೆ ಕೋಲಾರ ಜಿಲ್ಲೆಯ ಹಾಲಿಗೆ ಮಾರ್ಕೆಟಿಂಗ್‌ನ್ನು ಸ್ವಲ್ಪ ಬೇಗ ಬೇಗ ಮಾಡಬೇಕು. ಆ ಬಗ್ಗೆ ತಾವುಗಳು ಕ್ರಮ ಜರುಗಿಸಬೇಕು.

ಶ್ರೀ ಎ. ಕೃಷ್ಣಪ್ಪ :— ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯವರಿಗೆ ಈ ವಿಚಾರದಲ್ಲಿ ಯಾವ ಸಂಶಯವೂ ಇಲ್ಲ. ಅವರಿಗೆ ನಾವು ಬೇರೆ ಕಡೆಗಳಲ್ಲಿ ವ್ಯಾಪಾರವನ್ನು ಕೊಡಿಸಿಕೊಟ್ಟಿದ್ದೇವೆ. ಮೊನ್ನೆ ಇತ್ತೀಚೆಗೆ ಭಾರತ ಸರಕಾರದವರಿಗೂ ಕೂಡ ತಿಳಿಸಿದ್ದೇವೆ.

ನಮ್ಮಲ್ಲಿನ ಹಾಲಿನ ವಿಚಾರ ಹೀಗಿದೆ, ನೀವು ಹೊರ ದೇಶಗಳಿಂದ ಹಾಲು ತರಿಸುವುದನ್ನು ನಿಲ್ಲಿಸಬೇಕು, ನಮ್ಮ ರಾಜ್ಯದಲ್ಲಿ ಒಂದು ಕೋಟಿ ಹದಿನಾಲ್ಕು ಲಕ್ಷ ಲೀಟರ್‌ಗಳಷ್ಟು ಹಾಲು ಉತ್ಪಾದನೆಯಾಗುತ್ತಿದೆ, ಅದಕ್ಕೆ ನಮ್ಮ ಮಾರುಕಟ್ಟೆ ಇರಬೇಕು, ಎಂಬ ವಿಚಾರದಲ್ಲಿ ಒತ್ತಾಯ ಮಾಡಿದ್ದೇವೆ. ಜೊತೆಗೆ ಮೊನ್ನೆ ಪಾರ್ಲಿಮೆಂಟ್ ಸದಸ್ಯರ ಜೊತೆಗೆ ಮಾತುಕತೆ ಏನು ನಡೆಯಿತು, ಆಗ ಕೂಡ ನಮ್ಮ ಒತ್ತಾಯದ ಮಾತನ್ನು ಅವರಿಗೆ ತಿಳಿಸಿದ್ದೇವೆ. ಭಾರತ ಸರಕಾರ ಸ್ವದೇಶಿ- ವಿದೇಶಿ ವಿಚಾರದಲ್ಲಿ ಏನು ಮಾತುಕತೆ ಎತ್ತಿತ್ತು, ಆದರೆ ಈಗ ಯಾವರೀತಿಯಲ್ಲಿ ತದ್ವಿರುದ್ಧವಾಗಿ ನಡೆಯುತ್ತಿದ್ದಾರೆ, ಅದರ ಬಗ್ಗೆ ತಾವುಗಳು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಿದ್ದೇವೆ. ಎಲ್ಲಾ ಪಾರ್ಲಿಮೆಂಟ್ ಸದಸ್ಯರು ಪಕ್ಷಾತೀತವಾಗಿ ಈ ವಿಚಾರದಲ್ಲಿ ಹೋರಾಟ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಕೋಲಾರ ಜಿಲ್ಲೆಗೆ ಈ ಕುರಿತು ಸಹಾಯ ಮಾಡುವಲ್ಲಿ ನಮ್ಮಲ್ಲಿ ಎರಡನೇ ಅಭಿಪ್ರಾಯವಿಲ್ಲ. ನಾವು ಒಂದು ಹೆಜ್ಜೆ ಮುಂದಕ್ಕೆ ಹೋಗಿ ಸಹಾಯ ಮಾಡುತ್ತೇವೆ ಎಂಬುದನ್ನು ಹೇಳಬಯಸುತ್ತೇವೆ.

ಅಧ್ಯಕ್ಷರು :— ಮಾನ್ಯ ಎಂ.ವಿ. ಕೃಷ್ಣಪ್ಪನವರು ಇದನ್ನು ಪ್ರಾರಂಭ ಮಾಡಿದ್ದರು, ಈಗ ಎಸ್.ಎಂ. ಕೃಷ್ಣರವರು ಮತ್ತು ಎ. ಕೃಷ್ಣಪ್ಪರವರು ಸೇರಿಕೊಂಡು ಹೆಚ್ಚಿನ ಸಹಾಯ ಮಾಡಬೇಕೆಂದು ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಯವರು ಕೋಲಾರಕ್ಕೆ ಬಂದಾಗ ಕೇಳಿಕೊಂಡಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೇ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸುಮಾರು ಆರು ಲಕ್ಷ ಲೀಟರ್‌ಗಳಷ್ಟು ಹಾಲು ಉತ್ಪಾದನೆಯಿದೆ. ಕೋಲಾರದವರದ್ದು 5.77 ಲಕ್ಷ ಲೀಟರ್‌ಗಳಷ್ಟು ಉತ್ಪಾದನೆಯಿದೆ ಎಂದು ಕಾಣುತ್ತದೆ. ಆದ್ದರಿಂದ ನಾವು ಮೊದಲಸ್ಥಾನದಲ್ಲಿದ್ದೇವೆ. ಇದರಲ್ಲಿ ಇವರ ಉತ್ಪಾದನೆ- 4-5-70ರಲ್ಲಿ 25 ಸಾವಿರದಷ್ಟು ಕೂಡ ಲೋಕಲ್ ಬಳಕೆಯಿಲ್ಲ. ಇದೇ ರೀತಿಯಲ್ಲಿ ಹಾಸನದ ಹಾಲಿನ ಉತ್ಪಾದನೆಯು ಮಂಗಳೂರಿಗೆ ಹೋಗುತ್ತದೆ. ಇಲ್ಲಿನ ಉತ್ಪಾದನೆ ಬೆಂಗಳೂರಿನ 50 ಲಕ್ಷ ಜನರಿಗೆ ಕೊಡುವಂತಹ ವ್ಯವಸ್ಥೆ. ಆದ್ದರಿಂದ ಮಾರ್ಕೆಟಿಂಗ್ ವಿಚಾರದಲ್ಲಿ ಮದರ್ ಡೈರಿ ಜಾಸ್ತಿ ಮಾಡಬೇಕು. ಕೋಲಾರದವರು ಮಾರ್ಕೆಟಿಂಗ್ ಕೊಡಿ ಎಂದು ಕೇಳುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕೂಡ ಒಂದು ಲಕ್ಷ ಲೀಟರ್‌ಗಳಷ್ಟು ಎಕ್ಸಿಸ್ ಆಗಿರುತ್ತದೆ. ನಾವೂ ಕೂಡ ಪೌಡರ್ ಕನ್‌ವರ್ಶನ್‌ಗೆ ಕಳುಹಿಸುತ್ತಾ ಇದ್ದೇವೆ. ಬೆಂಗಳೂರಿಗೆ ತುಮಕೂರು, ಮಂಡ್ಯ, ಕೋಲಾರದವರೂ ಕೂಡ ಮಾರ್ಕೆಟಿಂಗ್ ತೆಗೆದುಕೊಂಡಿದ್ದಾರೆ. ಹಾಗಾದರೆ ಬೆಂಗಳೂರಿನವರಾದ ನಾವು ಮಾರ್ಕೆಟಿಂಗ್‌ಗೆ ಎಲ್ಲಿಗೆ ಹೋಗಬೇಕು? ಹೀಗೆ ಕಾಂಪಿಟೇಶನ್ ಮಾಡುವುದು ಆಗುವುದಿಲ್ಲ....

ಶ್ರೀ ಕೆ. ಶ್ರೀನಿವಾಸಗೌಡ :— ಮಾನ್ಯ ಬಚ್ಚೇಗೌಡರವರು ಹೇಳಿದ ಮಾತಿನ ತಾತ್ಪರ್ಯ ಹೇಗಾಗಿದೆ ಎಂದರೆ, ಸಂತೆಯಲ್ಲಿ ಮಳೆಬಂದಾಗ ಉಪ್ಪಿನವರು ಅತ್ತರು

ಎಂದು ತೆಂಗಿನಕಾಯಿಯವರೂ ಕೂಡ ಅತ್ತರು ಎಂಬ ಹಾಗಾಗಿದೆ. ಹಾಲಿನ ಮಾರ್ಕೆಟಿಂಗ್‌ನ್ನು ಎಲ್ಲರೂ ಎಲ್ಲಾ ಕಡೆಗಳಲ್ಲಿಯೂ ಮಾಡಬೇಕು. ಆದರೆ ಹೆರಿಟೇಜ್ ಕಂಪನಿಯಿಂದ, ಮತ್ತು ಇತರ ಹೊರ ರಾಜ್ಯಗಳ ಕಂಪನಿಗಳಿಂದ ದಿನಕ್ಕೆ ಸುಮಾರು ಮೂರು ಲಕ್ಷ ಲೀಟರ್‌ಗಳಷ್ಟು ಹಾಲನ್ನು ಬೆಂಗಳೂರಿನಲ್ಲಿ ಮಾರಾಟ ಮಾಡುತ್ತಿದ್ದಾರೆ. ಬೇರೆ ರಾಜ್ಯಗಳಿಂದ ಬರುವ ಹಾಲನ್ನು ಇಲ್ಲಿ ಮಾರುತ್ತಾ ಇದ್ದಾರೆ, ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗುವ ಹಾಲಿಗೆ ಬೇರೆ ಸಬೂಬನ್ನು ಅವರು ಹೇಳುತ್ತಿದ್ದಾರೆ. ಕೋಲಾರದಿಂದ ಮದರ್ ಡೈರಿಗೆ ಎರಡು ಲಕ್ಷದ ಇಪ್ಪತ್ತು ಸಾವಿರ ಲೀಟರ್‌ಗಳಷ್ಟು ಹಾಲನ್ನು ಕೊಡುತ್ತಾ ಇದ್ದಾರೆ, ಟೆಟ್ರಾಪ್ಯಾಕ್‌ಗೆ 25ಸಾವಿರ ಲೀಟರ್‌ಗಳಷ್ಟು ಮಾರಾಟ ಮಾಡುತ್ತಾ ಇದ್ದೀರಿ, ಬೆಂಗಳೂರು, ಕೋಲಾರಗಳಲ್ಲಿ ಸುಮಾರು 80ಸಾವಿರ ಲೀಟರ್‌ಗಳಷ್ಟು ಮಾರಾಟ ಮಾಡುತ್ತಾ ಇದ್ದೀರಿ. ಮದ್ರಾಸ್‌ಗೆ 8 ಸಾವಿರಗಳಷ್ಟು ಗೋವ ರಾಜ್ಯಕ್ಕೆ 40 ಸಾವಿರ ಹಾಗೂ ಕೇರಳಕ್ಕೆ 20 ಸಾವಿರ ಲೀಟರ್‌ಗಳಷ್ಟು ಕೊಡುತ್ತಾ ಇದ್ದೀರಿ. ಪರಿಸ್ಥಿತಿಯು ಹೀಗಿರುವಾಗ ಸುಮಾರು ಮೂರು ಲಕ್ಷ ಲೀಟರ್‌ಗಳಷ್ಟು ಹಾಲನ್ನು ಇಲ್ಲಿಗೆ ಬೇರೆ ರಾಜ್ಯಗಳಿಂದ ತರಿಸಿ ಮಾರುವಂತಾ ಪರಿಸ್ಥಿತಿ ಇಲ್ಲಿ ಏನಿದೆ? ನಾವೇ ಕಷ್ಟದಲ್ಲಿರುವಾಗ ನೀವು ಬೇರೆ ಕಡೆಯಿಂದ ತರಿಸಿಕೊಳ್ಳುವುದು ಏತಕ್ಕಾಗಿ ಎಂಬುದು ಒಂದು ಪ್ರಶ್ನೆ. ಹಾಗೆಯೇ ಮದರ್ ಡೈರಿಗೆ ಇದರ ಜವಾಬ್ದಾರಿ ಇಲ್ಲ ಎಂದು ಹೇಳಿದ್ದೀರಿ. 1-9-88ರಲ್ಲಿ ಕೋಲಾರದ ಮಿಲ್ಕ್ ಯುನಿಯನ್‌ನ ಹಾಲಿನ ಉತ್ಪಾದನೆಯನ್ನು ಪಡೆದುಕೊಳ್ಳುವ ಜವಾಬ್ದಾರಿಯು ಕರ್ನಾಟಕ ಕೊ-ಆಪರೇಟಿವ್ ಮಿಲ್ಕ್ ಪ್ರೊಡ್ಯೂಸರ್ಸ್ ಫೆಡರೇಷನ್‌ದ್ದು ಎಂದು ಹೇಳಿದ್ದಾರೆ.

ಅಧ್ಯಕ್ಷರು :— ಈ ವಿಚಾರದ ಬಗ್ಗೆ ಅರ್ಧಗಂಟೆ ಕಾಲಾವಧಿಯ ಪ್ರಸ್ತಾವನೆಯನ್ನು ಕಳುಹಿಸಿ ಕೊಡಿ... ಆಗ ವಿವರವಾಗಿ ಚರ್ಚೆ ಮಾಡಬಹುದು.

ಶ್ರೀ ಎ. ಕೃಷ್ಣಪ್ಪ :— ಮಾನ್ಯ ಅಧ್ಯಕ್ಷರೇ, ಈಗ ನಾವಿಬ್ಬರೂ ಸೇರಿ ಲಾಯರ್‌ಗಳ ಕೆಲಸವನ್ನು ಮಾಡಲು ಆಗುವುದಿಲ್ಲ. ಈಗ ನಾವು ಪರಿಹಾರವನ್ನು ಹುಡುಕುವ ಕೆಲಸವನ್ನು ಮಾಡಬೇಕಾಗಿದೆ. What is the quantity. You have any alternative figures determined in that matter?

Sri S. Srinivasa Gowda :— It is not decided to-day. It was decided in 1988.

ಶ್ರೀ ಎ. ಕೃಷ್ಣಪ್ಪ :— ಅಗ್ರಿಮೆಂಟ್ ಮಾಡುವಾಗ 20 ಸಾವಿರ ಲೀಟರ್‌ಗಳೆಂದು ಹಾಕಿಕೊಳ್ಳಬೇಕಾಗಿತ್ತು. Anyway, without going into the details of the subject, ಅವರು ಎರಡು ಮಾತುಗಳನ್ನು ಪ್ರಮುಖವಾಗಿ ಹೇಳಿದ್ದಾರೆ. ಇದಕ್ಕೆ ಪರಿಹಾರವನ್ನು ಕೊಡಬೇಕಾದಂಥ ಬದ್ಧತೆಯು ನಮಗೆ ಇದೆ. ಮಾನ್ಯ ಬೈರೇಗೌಡರು ಒಂದು ಸಲಹೆಯನ್ನು

ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸಿ ಆ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ಸದನಕ್ಕೆ ತಿಳಿಸುತ್ತೇನೆ. ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ ಹೊರಗಿನ ಖಾಸಗಿ ಕಂಪನಿಗಳು ಇಲ್ಲಿ ಬಂದು ಹಾಲನ್ನು ಮಾರುತ್ತಿದ್ದಾರೆ, ಆ ಬಗ್ಗೆ ಯಾವ ಕ್ರಮವನ್ನು ಜರುಗಿಸುತ್ತಿದ್ದೀರಿ ಎಂದು ಕೇಳಿದ್ದಾರೆ. It defeats your own question. Already we are selling it to 4 to 5 States. ಅವರೂ ಕೂಡ ನಾಳೆ ಅದೇ ತೀರ್ಮಾನವನ್ನು ನಮ್ಮ ವಿಚಾರದಲ್ಲಿ ತೆಗೆದುಕೊಂಡರೆ ಹೇಗೆ? I wanted to share the information given by the Hon'ble Member. He is giving the wrong information. ಕೇರಳದವರು ನಮ್ಮ ಹತ್ತಿರ ತೆಗೆದುಕೊಳ್ಳುತ್ತಿದ್ದಾರೆ, ಎಕ್ಸಿಸ್ ಪ್ರೊಡಕ್ಷನ್ ಇದೆ, ತಮಿಳುನಾಡಿನಲ್ಲಿ ಎಕ್ಸಿಸ್ ಪ್ರೊಡಕ್ಷನ್ ಇದೆ, ಮಹಾರಾಷ್ಟ್ರದಲ್ಲಿಯೂ ಎಕ್ಸಿಸ್ ಪ್ರೊಡಕ್ಷನ್ ಇದೆ, ಹೀಗೆ ಎಲ್ಲಾ ರಾಜ್ಯಗಳಲ್ಲಿಯೂ ಎಕ್ಸಿಸ್ ಪ್ರೊಡಕ್ಷನ್ ಇದೆ. ವೆಸ್ಟ್ ಬೆಂಗಾಲ್ ಮತ್ತು ಗೋವಾರಾಜ್ಯಗಳನ್ನು ಹೊರತುಪಡಿಸಿ ಎಲ್ಲಾ ರಾಜ್ಯಗಳಲ್ಲಿ ಎಕ್ಸಿಸ್ ಪ್ರೊಡಕ್ಷನ್ ಇದೆ. ಆದ್ದರಿಂದ ಕೇರಳದವರು ಆ ಸ್ಕ್ಯಾಂಡ್‌ನ್ನು ತೆಗೆದುಕೊಂಡರೆ ನಮ್ಮ ಕತೆ ಮುಗಿದು ಹೋಗುತ್ತದೆ. ಆದ್ದರಿಂದ ದಯಮಾಡಿ ಈ ಸ್ಕ್ಯಾಂಡ್‌ನ್ನು ನೀವು ಏನಾದರೂ ತೆಗೆದುಕೊಳ್ಳುವುದಾದರೆ ಕನ್‌ವರ್ಶನ್‌ಗೆ ಆಂಧ್ರಪ್ರದೇಶದಲ್ಲಿ ಏನು ಮಾಡುತ್ತಿದ್ದೇವೆ, ಕನ್‌ವರ್ಶನ್‌ಗೆ ತಮಿಳುನಾಡಿನ ಸಹಾಯ ತೆಗೆದುಕೊಂಡು ಏನು ಮಾಡುತ್ತಿದ್ದೇವೆ, ಎಂಬುದನ್ನು ತಿಳಿಸಿದ್ದೇವೆ. ಇದರ ಜೊತೆಗೆ ಸೇಲ್ ಮಾಡುವ ವಿಚಾರದಲ್ಲಿ ನಮಗೆ ಇರುವ ಕಾನೂನಿನ ಮಿತಿಯಲ್ಲಿ ಕ್ವಾಲಿಟಿ ಸರಿಯಾಗಿಲ್ಲ ಎಂದು ರೈಡಿಂಗ್ ತೆಗೆದುಕೊಂಡಿದ್ದೇವೆ, ಕೇಸ್‌ಗಳನ್ನು ಬುಕ್ ಮಾಡಿದ್ದೇವೆ. ಇಷ್ಟು ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ದಾವಣಗೆರೆ ಸಕ್ಕರೆ ಕಂಪನಿ, ಕುಕ್ಕವಾಡ ಇಲ್ಲಿ ರಸ್ತೆ ನಿರ್ವಹಣೆಗೆ ಹಣ ಸಂಗ್ರಹ

254(2738) ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಾವಣಗೆರೆ ಸಕ್ಕರೆ ಕಂಪನಿ, ಕುಕ್ಕವಾಡ ಇಲ್ಲಿ 1999-2000ನೇ ಸಾಲಿನಲ್ಲಿ ಕಬ್ಬು ಸರಬರಾಜು ಮಾಡಿದವರಿಂದ ರಸ್ತೆ ನಿರ್ವಹಣೆಗಾಗಿ (ರಸ್ತೆ ದುರಸ್ಥಿಗೆಂದು) ಪ್ರತಿ ಟನ್ ರೂ. 10.00ರಂತೆ ಹಣ ಸಂಗ್ರಹಿಸುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಇದರಿಂದಾಗಿ ಸಂಗ್ರಹಿಸಿರುವ ಒಟ್ಟು ಮೊತ್ತವೆಷ್ಟು ;

ಇ) ಇದರಲ್ಲಿ ಖರ್ಚಾಗಿರುವ ಹಣವೆಷ್ಟು ಯಾವ ಯಾವ ಕಾಮಗಾರಿಗಳಿಗಾಗಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ. (ವಿವರ ನೀಡುವುದು)

ಈ) ಈ ಪೈಕಿ ಪೂರ್ತಿ ಹಣ ಖರ್ಚಾಗದೇ ಉಳಿದಿದ್ದಲ್ಲಿ, ಅದನ್ನು ಯಾವಾಗ ಖರ್ಚು ಮಾಡಲಾಗುವುದು?